# ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಧರ್ಮಸಮನ್ವಯ

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ)

**ಹಿಂದಿನ ಸಂಚಿಕೆಯಲ್ಲಿ**

ವಿವೇಕಾನಂದರು ತಮ್ಮ ಗುರುದೇವರ ಧರ್ಮಸಮನ್ವಯ ಸಂದೇಶವನ್ನು ಪಾಶ್ಚಾತ್ಯ ದೇಶಗಳಲ್ಲಿ ಹರಡಿದರು; ಬಹುತ್ವ ಭಾವನೆಯನ್ನು ವ್ಯಾಪಕಗೊಳಿಸಿ, ವಿಶ್ವಾತ್ಮಕತೆಯೆಂಬ ನೂತನ ಕಲ್ಪನೆಯನ್ನು ಹುಟ್ಟು ಹಾಕಿದರು. ಅದು ಧರ್ಮಗಳ ನಡುವಣ ವ್ಯತ್ಯಾಸಗಳನ್ನು ಸಮನ್ವಯಗೊಳಿಸುತ್ತದೆ. ಶ್ರೀರಾಮಕೃಷ್ಣರ ಸಮನ್ವಯ ಸಿದ್ಧಾಂತಕ್ಕೆ ಸ್ವಾಮೀಜಿ ಮೂರು ಪೂರಕ ತತ್ತ್ವಗಳನ್ನು ಸೇರಿಸಿದರು. ಧರ್ಮವು ಮಾನವತೆಯ ಧಾರ್ಮಿಕ ಪ್ರಜ್ಞೆಯನ್ನು ಪ್ರತಿನಿಧಿಸುವ ಚಿರಂತನ ಧರ್ಮ, ವಿಶ್ವಧರ್ಮವು ಈಗ ಅಸ್ತಿತ್ವದಲ್ಲಿರುವ ಜಾಗತಿಕ ಧರ್ಮಗಳೆಲ್ಲದರ ಸಮಗ್ರತೆ – ಇದು ಮೊದಲೆರಡು ತತ್ತ್ವಗಳ ಸಾರ.

## ಸ್ವಾಮಿ ವಿವೇಕಾನಂದರ ವಿಶ್ವಧರ್ಮದ ಮೂರನೆಯ ತತ್ತ್ವ

ಸ್ವಾಮಿ ವಿವೇಕಾನಂದರ ವಿಶ್ವಧರ್ಮದ ಮೊದಲ ಎರಡು ಪರಿಕಲ್ಪನೆಗಳು ಈಗ ಸದ್ಯ ಅಸ್ತಿತ್ವದಲ್ಲಿರುವ ವಿಶ್ವಧರ್ಮಗಳನ್ನು ಕುರಿತಾಗಿದ್ದವು. ಮೊದಲನೆಯ ಪರಿಕಲ್ಪನೆಯಲ್ಲಿ ಅವರು ಜಗತ್ತಿನ ಎಲ್ಲ ಧರ್ಮಗಳೂ ಒಂದು ಚಿರಂತನ ವಿಶ್ವಧರ್ಮದ ಅಭಿವ್ಯಕ್ತಿಗಳು ಎಂದು ಪರಿಗಣಿಸುತ್ತಾರೆ. ಎರಡನೆಯ ಪರಿಕಲ್ಪನೆಯ ವಿಶ್ವಧರ್ಮವು ಸದ್ಯ ಅಸ್ತಿತ್ವದಲ್ಲಿರುವ ಎಲ್ಲ ಧರ್ಮಗಳನ್ನೂ ಒಳಗೊಂಡ ಒಂದು ಸಮಗ್ರ ಭಾವನೆಯೇ ಆಗಿದೆ. ಈ ಎರಡು ಪರಿಕಲ್ಪನೆಗಳಲ್ಲದೆ, ಸ್ವಾಮಿ ವಿವೇಕಾನಂದರು ಈಗ ಇರುವ ಧರ್ಮಗಳ ಬಗ್ಗೆ ಯಾವ ಬಗೆಯ ಪ್ರಸ್ತಾಪವನ್ನೂ ಮಾಡದೆ, ಮೂರನೆಯ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಿದರು. ಈ ಮೂರನೆಯ ಪರಿಕಲ್ಪನೆಯು ಧರ್ಮ, ಜನಾಂಗ, ಲಿಂಗ ಭೇದಗಳಿಲ್ಲದೆ, ಸಕಲ ಮಾನವ ಸಮುದಾಯಕ್ಕೆ ಸಂಬಂಧಿಸಿದುದಾಗಿದೆ. ಇದು ಜೀವನ ಮತ್ತು ಸತ್ಯಗಳ ಬಗೆಗಿನ ಸ್ವಾಮಿ ವಿವೇಕಾನಂದರ ಸಮಗ್ರ ದೃಷ್ಟಿಯನ್ನು ಪ್ರತಿನಿಧಿಸುತ್ತದೆ.

ಈ ಮೂರನೆಯ ಪರಿಕಲ್ಪನೆಯಲ್ಲಿ, ತನ್ನ ಸೀಮಿತತೆಗಳನ್ನು ಮೀರಿಹೋಗಲು, ಜೀವನದ ಪರಮಾರ್ಥವನ್ನು ಕಂಡುಹಿಡಿಯಲು, ಪರಿಪೂರ್ಣ ಸ್ವಾತಂತ್ರ್ಯ ಮತ್ತು ಚಿರಂತನ ಸಾರ್ಥಕತೆಯನ್ನು ಪಡೆಯಲು ಮಾನವನು ನಡೆಸುತ್ತಿರುವ ಹೋರಾಟವನ್ನೇ ಧರ್ಮವೆಂದು ಪರಿಗಣಿಸಲಾಗಿದೆ. ಇದರ ಪ್ರಕಾರ, ಧರ್ಮವೆಂದರೆ ಒಂದು ವೈಯಕ್ತಿಕ ಪ್ರಯತ್ನ. ಆದ್ದರಿಂದಲೇ ಸ್ವಾಮೀಜಿ, ಪ್ರತಿಯೊಬ್ಬನೂ ತನ್ನದೇ ಆದ ಧರ್ಮವನ್ನು ಹೊಂದಿರಬೇಕೆಂದು ನಂಬಿದ್ದರು. ಅವರು ಹೇಳಿದರು: "ಯಾವ ಮನುಷ್ಯನೂ ಯಾವ ಧರ್ಮದಲ್ಲೂ ಜನ್ಮತಾಳಲಿಲ್ಲ; ಅವನ ಆತ್ಮದಲ್ಲಿಯೇ ಅವನ ಧರ್ಮವಿರುವುದು."[1] ಈ ಭಾವನೆಯು ನಾವು ಹಿಂದೆಯೇ ನೋಡಿದ ವೈಟ್‌ಹೆಡ್‌ನ ವ್ಯಾಖ್ಯಾನಕ್ಕೆ ಹತ್ತಿರವಾಗಿದೆ. "ತನ್ನ ಏಕಾಂತತೆಯೊಡನೆ ಇರುವುದೇ (ತನ್ಮಯತೆ) ಧರ್ಮ."

ಏನೇ ಇರಲಿ, ಧರ್ಮವು ಇಡೀ ಮಾನವತೆಗೆ ಸಂಬಂಧಿಸಿದ್ದು. ಆದ್ದರಿಂದ ಅದಕ್ಕೆ ಸಮಷ್ಟಿ ಮುಖವೂ ಇದೆ. ಸ್ವಾಮಿ ವಿವೇಕಾನಂದರ ವಿಶ್ವಧರ್ಮ ಕಲ್ಪನೆಯ ಮೂರನೆಯ ಪರಿಕಲ್ಪನೆಯು ಐದು ಬಗೆಯ ಸಮನ್ವಯಗಳನ್ನು ಒಳಗೊಂಡದ್ದಾಗಿದೆ. ಈ ಐದು ಬಗೆಯ ಸಮನ್ವಯ ಭಾವನೆಗಳನ್ನು ಕೆಳಗೆ ಚರ್ಚಿಸಲಾಗಿದೆ:

೧. **ಲೌಕಿಕ ಮತ್ತು ಪಾರಮಾರ್ಥಿಕಗಳ ನಡುವಿನ ಸಮನ್ವಯ:** ಸ್ವಾಮೀಜಿ ಜೀವನವನ್ನು ಅಖಂಡವಾಗಿ ನೋಡಿದರು. ಅವರು ಲೌಕಿಕ ಮತ್ತು ಪಾರಮಾರ್ಥಿಕಗಳ ನಡುವಿನ ಗೋಡೆಯನ್ನು ನಿವಾರಿಸಿದ್ದು, ಪಾರಮಾರ್ಥಿಕವನ್ನು ಲೌಕಿಕವನ್ನಾಗಿಸಿಯಲ್ಲ, ಲೌಕಿಕವನ್ನು ಪಾರಮಾರ್ಥಿಕವನ್ನಾಗಿಸಿ, ಆ ಮೂಲಕ ಅವರು ಇಡೀ ಜೀವನವನ್ನು ದಿವ್ಯಮಯವಾಗಿಸಿದರು. ಬಾಳನ್ನು ದಿವ್ಯಮಯಗೊಳಿಸುವುದು ಸ್ವಾಮೀಜಿಯವರ ಧರ್ಮದ ಒಂದು ಮುಖ್ಯ ಪರಿಕಲ್ಪನೆಯಾಗಿದೆ.

೨. **ವಿಜ್ಞಾನ ಮತ್ತು ಧರ್ಮಗಳ ನಡುವಿನ ಸಮನ್ವಯ:** ಆಧುನಿಕ ಯುಗದಲ್ಲಿ ವಿಜ್ಞಾನವು ಧರ್ಮಕ್ಕೆ ದೊಡ್ಡ ಸವಾಲನ್ನು ಒಡ್ಡಿದೆ. ಸ್ವಾಮಿ ವಿವೇಕಾನಂದರು ವಿಜ್ಞಾನ ಮತ್ತು ಧರ್ಮಗಳ ಸಮನ್ವಯದ ಮೂಲಕ ಈ ಸವಾಲನ್ನು ಎದುರಿಸಿದರು. ವಿಜ್ಞಾನ ಮತ್ತು ಧರ್ಮಗಳೆರಡೂ ಪರಮಸತ್ಯವನ್ನು ತಿಳಿದುಕೊಳ್ಳಲು, ಮಾನವನು ನಡೆಸಿರುವ ಒಂದೇ ಬಗೆಯ ಅನ್ವೇಷಣೆಯೆಂದು ಅವರು ಬಗೆದಿದ್ದರು; ವಿಜ್ಞಾನವು ಇಂದ್ರಿಯಗ್ರಾಹ್ಯ ಪ್ರಪಂಚದಲ್ಲಿ ತನ್ನ ಅನ್ವೇಷಣೆಯನ್ನು ನಡೆಸಿದರೆ ಧರ್ಮವು ಅದೇ ಕಾರ್ಯವನ್ನು ಇಂದ್ರಿಯಾತೀತ ಅಸ್ತಿತ್ವದ ನೆಲೆಯಲ್ಲಿ ನಡೆಸುತ್ತದೆ.

೩. **ಮಾನವ ಪ್ರೇಮ ಮತ್ತು ಭಗವತ್ಪ್ರೇಮಗಳ ನಡುವಣ ಸಮನ್ವಯ:** ಸಹಜೀವಿಗಳ ಮೇಲಿನ ಪ್ರೀತಿಯು ಬಂಧನವಾದ್ದರಿಂದ, ಅದು ಭಗವತ್ಪ್ರೇಮಕ್ಕೆ ಬಾಧಕವೆಂದು ಅನೇಕ ಶತಮಾನಗಳಿಂದ ಹಿಂದೂ ಧರ್ಮದಲ್ಲಿ ಪರಿಗಣಿಸಲಾಗಿತ್ತು. ಮಾನವನಲ್ಲಿ ಭಗವಂತನನ್ನು ಕಾಣಬೇಕೆಂಬ ತತ್ತ್ವವನ್ನು ಪ್ರತಿಪಾದಿಸುವ ಮೂಲಕ ಸ್ವಾಮೀಜಿ ಈ ಎರಡು ಬಗೆಯ ಪ್ರೀತಿಯ ಭಾವನೆಗಳನ್ನು ಸಮನ್ವಯಗೊಳಿಸಿದರು. ಆತ್ಮಸ್ವರೂಪಿಯಾದ ಮಾನವನು ತನ್ನ ನೈಜಸ್ವರೂಪದಲ್ಲಿ, ದೇವರು ಅಥವಾ ಪರಮಾತ್ಮನಿಗಿಂತ ಅಭಿನ್ನನಾಗಿದ್ದಾನೆ. ಆದ್ದರಿಂದ ಮಾನವನನ್ನು ಪ್ರೀತಿಸುವುದು ಎಂದರೆ, ಭಗವಂತನನ್ನು ಪ್ರೀತಿಸಿದಂತೆಯೇ. ಪ್ರೀತಿಯೆಂದರೆ, ಎಲ್ಲ ಮಾನವ ಜನಾಂಗವು ಆಧ್ಯಾತ್ಮಿಕವಾಗಿ ಭಗವಂತನಲ್ಲಿ ಒಂದಾಗುವ ಪ್ರಕ್ರಿಯೆಯ ಅಭಿವ್ಯಕ್ತಿಯೆಂದೇ ಸ್ವಾಮೀಜಿ ಪರಿಗಣಿಸಿದ್ದರು.

೪. **ಧ್ಯಾನಜೀವನ ಮತ್ತು ಕ್ರಿಯಾಶೀಲ ಜೀವನಗಳ ಸಮನ್ವಯ:** ಧ್ಯಾನಾಭ್ಯಾಸದ ಮುಖ್ಯ ಉದ್ದೇಶವೆಂದರೆ, ಪ್ರತ್ಯಗಾತ್ಮ ಅಥವಾ ಪರಮಾತ್ಮನ ಪ್ರಜ್ಞೆಯು ಮೂಡುವಂತೆ, ಮನಸ್ಸನ್ನು ಸ್ಥಿರವಾಗಿಸುವುದು. ಅಭ್ಯಾಸ ಮಾಡಿದರೆ, ಈ ಬಗೆಯ ಧ್ಯಾನಸಿದ್ಧ ಸ್ವಯಂಪ್ರಜ್ಞೆಯನ್ನು ಕಾರ್ಯತತ್ಪರನಾಗಿರುವಾಗಲೂ ಮೈಗೂಡಿಸಿಕೊಳ್ಳಬಹುದು. ಕರ್ಮಯೋಗದ ಕೇಂದ್ರ ನಿಯಮವೇ ಇದು. ಒಬ್ಬನು ಅಂತಹ ಸ್ಥಿತಿಯನ್ನು ತಲುಪಿದರೆ, ಅವನಲ್ಲಿ ಧ್ಯಾನಜೀವನ ಮತ್ತು ಕ್ರಿಯಾಶೀಲ ಜೀವನಗಳ

ನಡುವಣ ಆಂತರಿಕ ವ್ಯತ್ಯಾಸವೇ ಮರೆಯಾಗುವುದು. ಗಂಭೀರರೂಪದ ಕೆಲಸಕಾರ್ಯಗಳ ನಡುವೆಯೂ ಒಬ್ಬನು ತೀವ್ರವಾದ ಆಂತರಿಕ ಪ್ರಶಾಂತಿಯನ್ನು ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಕಾಪಾಡಿಕೊಂಡು ಬರಬಹುದು.

೫. **ವ್ಯಕ್ತಿತ್ವದ ಸಮಗ್ರ ಬೆಳವಣಿಗೆ:** ಪ್ರತಿಯೊಬ್ಬ ವ್ಯಕ್ತಿಯೂ ನಾಲ್ಕು ಅಂಶಗಳನ್ನು ಅಥವಾ ಸಾಮರ್ಥ್ಯಗಳನ್ನು ಸಹಜವಾಗಿಯೇ ಹೊಂದಿರುತ್ತಾನೆ. ಅವೆಂದರೆ **ಚಿಂತನೆ, ಭಾವನೆ, ಇಚ್ಛಾಶಕ್ತಿ ಮತ್ತು ಕಾರ್ಯಕುಶಲತೆ**. ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ ಮೇಲಿನ ಎಲ್ಲ ಅಂಶಗಳ ಸರಿಯಾದ ಬೆಳವಣಿಗೆ ಅತ್ಯಾವಶ್ಯಕ. ಈ ಬಗೆಯ ಸುಸಂಯೋಜಿತ, ಸಮಗ್ರ ವ್ಯಕ್ತಿಗಳಾಗಿ ಮಾನವರು ಅಭಿವೃದ್ಧಿ ಹೊಂದ ಬೇಕೆನ್ನುವುದು ಸ್ವಾಮಿ ವಿವೇಕಾನಂದರ ವಿಶ್ವಧರ್ಮದ ಮೂರನೆಯ ಪರಿಕಲ್ಪನೆಯ ಒಂದು ಪ್ರಮುಖ ಅಂಶ. ವಿಶ್ವಧರ್ಮದ ಬಗ್ಗೆ ಸ್ವಾಮೀಜಿ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ನೀಡಿದ ಭಾಷಣದಲ್ಲಿ ಹೀಗೆ ಹೇಳುತ್ತಾರೆ:

> "ದೇವರ ದಯೆಯಿಂದ ಎಲ್ಲರಲ್ಲಿಯೂ ಜ್ಞಾನ, ಯೋಗ, ಭಕ್ತಿ, ಕರ್ಮಗಳು ಸಮನಾಗಿ ಹೊಂದಿಕೊಂಡಿದ್ದರೆ! ಇದೇ ಆದರ್ಶ; ನನ್ನ ದೃಷ್ಟಿಯಲ್ಲಿ ಇದೇ ಪರಿಪೂರ್ಣ ವ್ಯಕ್ತಿಯೊಬ್ಬನ ಆದರ್ಶ......ಈ ನಾಲ್ಕು ಪಥಗಳಿಗೂ ಸಮನಾಗಿ ಹೊಂದಿಕೊಂಡಿರುವುದು ನನ್ನ ಧರ್ಮದ ಆದರ್ಶ. [೨]

ಸ್ವಾಮಿ ವಿವೇಕಾನಂದರ ಮಟ್ಟಿಗಂತೂ ದೇವರ ಮೇಲಿನ ನಂಬಿಕೆ, ಒಂದು ಮತದ ಮೇಲಿನ ನಿಷ್ಠೆ ಅಥವಾ ಕೆಲವು ಆಚರಣೆಗಳು ಮತ್ತು ಪದ್ಧತಿಗಳನ್ನು ಅನುಸರಿಸುವುದು ಮಾತ್ರವೇ ಧರ್ಮವಲ್ಲ. ಅವರ ಪ್ರಕಾರ ಇಡೀ ಜೀವನವೇ ಧರ್ಮದ ರೂಪವನ್ನು ಪಡೆದು ಕೊಳ್ಳುತ್ತದೆ. ಧರ್ಮವೆಂದರೆ, ಮಾನವ ಜೀವನವನ್ನು ಭಗವತ್ ಚೈತನ್ಯಯುತ ಜೀವನವನ್ನಾಗಿ ಪರಿವರ್ತಿಸುವ ಬಗೆಯಲ್ಲದೆ ಬೇರಲ್ಲ. ಅದು ನಮ್ಮ ಪ್ರತಿಯೊಂದು ಚಿಂತನೆ, ಭಾವನೆ ಮತ್ತು ಕ್ರಿಯೆಗಳನ್ನು ಆಧ್ಯಾತ್ಮಿಕ ಸಾಧನೆಯ ಅಂಗವನ್ನಾಗಿ ಪರಿವರ್ತಿಸುವದೇ ಆಗಿದೆ. ಒಬ್ಬನ ಇಡೀ ಜೀವನವನ್ನು ಒಂದು ಅವಿರತ ಯೋಗಸಾಧನೆಯನ್ನಾಗಿ ಪರಿವರ್ತಿಸುವುದೇ ಧರ್ಮ; ಮಾನವನನ್ನು ದಿವ್ಯವಾಗಿಸುವುದೇ ಧರ್ಮ. ಇಂತಹ ದೈವೀಕೃತ ಬಾಳನ್ನು ಎಲ್ಲಾ ಧರ್ಮಗಳ ಮಹಾನ್ ಸಂತರು ಮತ್ತು ಅನುಭಾವಿಗಳ ಜೀವಿತದಲ್ಲಿ ಕಾಣಬಹುದು.

ಇದುವರೆಗೂ ವಿಚಾರಮಾಡಿದ್ದು, ಸ್ವಾಮಿ ವಿವೇಕಾನಂದರ ವಿಶ್ವಧರ್ಮದ ಪರಿಕಲ್ಪನೆಯನ್ನು. ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ ಮತ್ತು ರಾಜಕೀಯ ತಂತ್ರಗಳು ಹಾಗೂ ಜಾಗತೀಕರಣಗಳ ಇತರ ಶಕ್ತಿಗಳು ಇತ್ತೀಚಿನ ದಿನಗಳಲ್ಲಿ ಪ್ರಪಂಚದ ಎಲ್ಲ ಜನಗಳನ್ನೂ ಹತ್ತಿರವಾಗಿಸುತ್ತಿರುವಾಗ, ಈ ಬಗೆಯ ಪ್ರಬುದ್ಧ ವಿಶ್ವಧರ್ಮ ಪರಿಕಲ್ಪನೆಯು ಅತ್ಯಂತ ಮಹತ್ವದ ಭೂಮಿಕೆಯನ್ನು ಪಡೆದುಕೊಳ್ಳುತ್ತದೆ.

### ಧರ್ಮಸಮನ್ವಯ: ರಾಮಕೃಷ್ಣ ಆಂದೋಲನದ ಜೀವಂತ ಸಂಪ್ರದಾಯ

ಧರ್ಮಸಮನ್ವಯವು ರಾಮಕೃಷ್ಣ ಆಂದೋಲನದ ಜೀವಂತ ಸಂಪ್ರದಾಯವಾಗಿದೆ. ನಾವೀಗಾಗಲೇ ಚರ್ಚಿಸಿದ, ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ಧರ್ಮಸಮನ್ವಯ ತತ್ತ್ವಗಳನ್ನು, ಭಾರತ ಮತ್ತು ಪ್ರಪಂಚದ ಇತರ ಭಾಗಗಳಲ್ಲಿ ಹಬ್ಬಿರುವ ತನ್ನ ೧೬೫ ಕ್ಕೂ ಹೆಚ್ಚಿನ ಶಾಖೆಗಳ ಮೂಲಕ, ರಾಮಕೃಷ್ಣ ಮಠ ಮತ್ತು ಮಿಷನ್ ಅನುಷ್ಠಾನಕ್ಕೆ ತರುತ್ತಿದೆ. ಧರ್ಮಸಮನ್ವಯವು ರಾಮಕೃಷ್ಣ ಆಂದೋಲನದಲ್ಲಿ ಹಲವಾರು ವಿಧಗಳಲ್ಲಿ ಅಭಿವ್ಯಕ್ತಿಯನ್ನು ಕಂಡುಕೊಂಡಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಚರ್ಚಿಸಲಾಗುವುದು:

೧.ಮೊದಲನೆಯದಾಗಿ, ರಾಮಕೃಷ್ಣ ಸಂಘದ ಸಂನ್ಯಾಸೀ ಸಂಪ್ರದಾಯದಲ್ಲಿ ಎಲ್ಲ ಧರ್ಮ, ಜಾತಿ ಮತ್ತು ಜನಾಂಗಗಳಿಗೆ ಸೇರಿದವರಿಗೆ ಅವಕಾಶವಿದೆ. ಹಿಂದೂಗಳು, ಕ್ರೈಸ್ತರು, ಮುಸ್ಲಿಮರು, ಯಹೂದಿಗಳು, ಬೌದ್ಧರು, ವಿವಿಧ ದೇಶಗಳಿಂದ ಬಂದವರು ರಾಮಕೃಷ್ಣ ಮಹಾಸಂಘದ ಆಶ್ರಮಗಳಲ್ಲಿ ಒಂದೇ ಕುಟುಂಬಕ್ಕೆ ಸೇರಿದ ಮಕ್ಕಳಂತೆ ಪರಸ್ಪರ ಪ್ರೀತಿ ಮತ್ತು ಸಹಕಾರ ಮನೋಭಾವಗಳಿಂದ ಒಟ್ಟಾಗಿ ಬಾಳುತ್ತಾರೆ.

೨.ರಾಮಕೃಷ್ಣ ಆಂದೋಲನದ ಗೃಹಸ್ಥ ಭಕ್ತರೂ ಕೂಡ, ಹಲವಾರು ಧಾರ್ಮಿಕ ಪಂಗಡಗಳಿಗೆ ಮತ್ತು ದೇಶಗಳಿಗೆ ಸೇರಿದವರಾಗಿದ್ದು, ತಮ್ಮ ನೆರೆಹೊರೆಯವರೊಡನೆ ಧರ್ಮಸಮನ್ವಯದ ನಿಯಮಗಳ ಆಧಾರದ ಮೇಲೆ ಶಾಂತಿಯಿಂದ ಸಹಬಾಳ್ವೆ ನಡೆಸುತ್ತಾರೆ. ಅವರು ತಮ್ಮ ತಮ್ಮ ಧರ್ಮಗಳಿಗೆ ತೋರುವ ಶ್ರದ್ಧೆಯನ್ನು ತ್ಯಜಿಸುವ ಅಗತ್ಯವಿಲ್ಲ ಹಾಗೂ ಯಾವುದೇ ಪೂಜಾಸ್ಥಳಕ್ಕೆ ಭೇಟಿ ನೀಡಿ, ಆಯಾ ಧಾರ್ಮಿಕ ಪದ್ಧತಿಗಳು ಮತ್ತು ಆಚರಣೆಗಳನ್ನು ಅನುಸರಿಸಲು ಯಾವುದೇ ನಿರ್ಬಂಧವಿಲ್ಲ.

೩. ರಾಮಕೃಷ್ಣ ಮಹಾಸಂಘದ ಎಲ್ಲ ಶಾಖೆಗಳಲ್ಲಿಯೂ ವಿಶ್ವಧರ್ಮಗಳ ಸಂಸ್ಥಾಪಕರಾದ ಮಹಾನ್ ವ್ಯಕ್ತಿಗಳ ಜಯಂತಿಯನ್ನು ಆಚರಿಸ ಲಾಗುವುದು. ರಾಮಕೃಷ್ಣ ಮಹಾಸಂಘವು ವಿವಿಧ ಧರ್ಮಗಳ, ಅದರ ಸಂಸ್ಥಾಪಕರ ಹಾಗೂ ಅವರ ಬೋಧನೆಗಳ ಬಗ್ಗೆ ಪುಸ್ತಕ ಗಳನ್ನು ಮತ್ತು ಲೇಖನಗಳನ್ನು ಪ್ರಕಟಿಸುತ್ತದೆ. (*ಇತ್ತೀಚೆಗೆ ವಿವೇಕಪ್ರಭವು, ಹಿಂದೂ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ತಾತ್ತ್ವಿಕ ವಿಚಾರಗಳನ್ನು ನಿರೂಪಿಸುವ ಲೇಖನಗಳನ್ನು ಪ್ರಕಟಿಸಿದೆ. –ಸಂ.*)

೪. ರಾಮಕೃಷ್ಣ ಮಹಾಸಂಘದ ಬ್ರಹ್ಮಚಾರಿಗಳಿಗೆ ತುಲನಾತ್ಮಕ ಧರ್ಮ ಶಾಸ್ತ್ರ (Comparative Religion) ಮತ್ತು ವಿವಿಧ ಧರ್ಮಗಳ ಶಾಸ್ತ್ರಗ್ರಂಥಗಳನ್ನು ಬೋಧಿಸಲಾಗುವುದು. ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳು ವಿವಿಧ ಧರ್ಮಗಳಿಗೆ ಸೇರಿದ ಸಾಧುಸಂತರ ಕೃತಿಗಳನ್ನು ಅಧ್ಯಯನ ಮಾಡಿ ಪ್ರಯೋಜನ ಪಡೆಯುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಅದಲ್ಲದೆ, ರಾಮಕೃಷ್ಣ ಮಠ ಮತ್ತು ಮಿಷನ್ನಿಗೆ ಸೇರಿದ ಸಂಸ್ಥೆಗಳಲ್ಲಿ ಇತರ ಧರ್ಮಗಳ ಬಗ್ಗೆ ಮತ್ತು ಅದರ ಧಾರ್ಮಿಕ ಮುಖಂಡರ ಬಗ್ಗೆ ಕಟು ನುಡಿಗಳನ್ನಾಡುವುದಕ್ಕೆ ಅವಕಾಶವಿಲ್ಲ.

೫. ಧರ್ಮಸಮನ್ವಯದ ಆದರ್ಶವನ್ನು ಪ್ರಚುರಗೊಳಿಸಲು ರಾಮಕೃಷ್ಣ ಮಠ ಮತ್ತು ಮಿಷನ್ ಕೈಗೊಂಡಿರುವ ಇನ್ನೊಂದು ವಿಧಾನವೆಂದರೆ ಅಂತರಧಾರ್ಮಿಕ ಸಮಾವೇಶಗಳ ಆಯೋಜನೆ. ಅವುಗಳಲ್ಲಿ, ವಿವಿಧ ಧರ್ಮಗಳ ಪ್ರತಿನಿಧಿಗಳು ತಮ್ಮ ತಮ್ಮ ಧರ್ಮಗಳ ಬಗ್ಗೆ ಭಾಷಣ ಮಾಡುತ್ತಾರೆ.

೬. ಕಡೆಯದಾಗಿ, ರಾಮಕೃಷ್ಣ ಮಹಾಸಂಘವು ಮೂಲಭೂತವಾದಿ ಗುಂಪುಗಳಿಂದ ದೂರ ಇರುತ್ತದೆ ಮತ್ತು ಯಾವುದೇ ರೀತಿಯ ರಾಜಕೀಯ ಚಟುವಟಿಕೆಗಳಲ್ಲಿ ಅದು ಪಾಲ್ಗೊಳ್ಳುವುದಿಲ್ಲ.

ರಾಮಕೃಷ್ಣ ಮಹಾಸಂಘವು ಧರ್ಮಸಾಮರಸ್ಯದ ಆದರ್ಶವನ್ನು ಅನುಷ್ಠಾನಗೊಳಿಸುತ್ತಿರುವ ವಿವಿಧ ವಿಧಾನಗಳ ಸಂಕ್ಷಿಪ್ತ ವಿವರಣೆಯನ್ನು ನಾವು ನೀಡಿದ್ದೇವೆ. ಇವುಗಳಲ್ಲದೆ, ಈ ಮಹಾನ್ ಆಂದೋಲನವನ್ನು ಅಧ್ಯಯನ ಮಾಡಿರುವ ಯಾರೇ ಆಗಲಿ, ಇಲ್ಲಿ ಧರ್ಮಸಾಮರಸ್ಯವು ಅನುಷ್ಠಾನಗೊಳ್ಳುವ ಕೆಲವು ವಿಶಿಷ್ಟ ಸಂಗತಿಗಳನ್ನು ಗಮನಿಸದೇ ಇರಲಾರರು. ಅವುಗಳು ಹೀಗಿವೆ:

೧. ಮೊದಲನೆಯದಾಗಿ, ಧರ್ಮಸಾಮರಸ್ಯವು ಹೊಸ ಸಂಗತಿ ಯೇನೂ ಅಲ್ಲ. ಸಮೂಹ ಮಾಧ್ಯಮಗಳು, ಜಾಗತೀಕರಣ, ದೊಡ್ಡ ದೊಡ್ಡ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳು – ಇವೆಲ್ಲವುಗಳ ಪ್ರಭಾವದಿಂದ, ಧರ್ಮ ಮತ್ತು ಸಂಸ್ಕೃತಿಯ ವಿಷಯಗಳಲ್ಲಿ ಬಹುಮುಖಿ (pluralistic) ಧೋರಣೆಯನ್ನು ಅನುಸರಿಸುವುದರ ಬಗೆಗಿನ ಮಹತ್ವದ ಅರಿವು ಈಗ ಹೆಚ್ಚಾಗುತ್ತಿದೆ. ಆಧುನಿಕ ಯುವಕರು ಬಹು–ಧಾರ್ಮಿಕ, ಬಹು–ಸಾಂಸ್ಕೃತಿಕ ಅಲ್ಲದೆ, ಬಹುರಾಷ್ಟ್ರೀಯ ಮನೋಭಾವನೆಯನ್ನೂ ಹೊಂದಿರುತ್ತಾರೆ. ಆದರೆ ರಾಮಕೃಷ್ಣ ಮಹಾಸಂಘದ ಧರ್ಮಸಾಮರಸ್ಯದ ಆಚರಣೆಗೂ ಮೇಲೆ ಹೇಳಿದ ಇತ್ತೀಚಿನ ವಿದ್ಯಮಾನಗಳಿಗೂ ಯಾವ ಸಂಬಂಧವೂ ಇಲ್ಲ. ಈ ಆಂದೋಲನ ದಲ್ಲಿ ಧರ್ಮಸಾಮರಸ್ಯವನ್ನು ೧೫೦ ವರ್ಷಗಳಿಂದಲೂ ಅನುಸರಿ ಸಲಾಗುತ್ತಿದೆ.

೨. ರಾಮಕೃಷ್ಣ ಮಹಾಸಂಘದ ಧರ್ಮಸಮನ್ವಯ ಆಚರಣೆಯ ಇನ್ನೊಂದು ಲಕ್ಷಣವೆಂದರೆ, ಅಧಿಕೃತತೆ (authenticity). ಇಲ್ಲಿ ಧರ್ಮಸಾಮರಸ್ಯವೆಂಬುದು ಬರಿಯ ಬಾಹ್ಯ ಪ್ರದರ್ಶನವಲ್ಲ. ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುವ ತಂತ್ರವಿಧಾನವೂ ಅಲ್ಲ. ಈ ಸಂಘಕ್ಕೆ ಸೇರಿದ ಸಂನ್ಯಾಸಿಗಳು ಮತ್ತು ಇತರ ಸಾಧಾರಣ ಜನರು ಸಹಜ ವಾಗಿಯೇ ಪರಿಪಾಲಿಸುವ ಜೀವನವಿಧಾನವಿದು. ಈ ಮಾರ್ಗವು ಯುಕ್ತವಾದುದು ಮತ್ತು ಆಧುನಿಕ ಜನಾಂಗಕ್ಕೆ ಶ್ರೀರಾಮಕೃಷ್ಣರು ತೋರಿಸಿಕೊಟ್ಟ ಸತ್ಯಪಥವಾಗಿದೆ ಎಂತಲೇ ಇದನ್ನು ಅನುಸರಿಸ ಲಾಗುತ್ತಿದೆ.

೩. ಮೂರನೆಯದಾಗಿ, ಧಾರ್ಮಿಕ ಸಾಮರಸ್ಯದ ಅನುಷ್ಠಾನವು ಶ್ರೀರಾಮಕೃಷ್ಣರು ಮಾನವ ಜನಾಂಗದ ಮೇಲೆ ಇರಿಸಿದ್ದ ದಿವ್ಯಪ್ರೇಮದ ಅಭಿವ್ಯಕ್ತ ರೂಪವಾಗಿದೆ. ಈ ಜಗತ್ತು ಕಂಡ, ಮಾನವ ಜನಾಂಗವನ್ನು ಪ್ರೀತಿಸಿದ ಮಹಿಮಾನ್ವಿತರಲ್ಲಿ ಅಗ್ರಗಣ್ಯರ ಶ್ರೇಣಿಗೆ ಸೇರಿದವರು ಶ್ರೀರಾಮಕೃಷ್ಣರು. ಅವರ ಪ್ರೇಮವು ಜಾತಿ, ಮತ ಮತ್ತು ಜನಾಂಗಗಳ ಎಲ್ಲೆಗಳನ್ನು ಮೀರಿತ್ತು. ವಿಶ್ವಧರ್ಮಗಳ ಸಂಸ್ಥಾಪಕರೆಲ್ಲರನ್ನೂ – ಕೃಷ್ಣ, ಬುದ್ಧ, ಏಸುಕ್ರಿಸ್ತ, ಮುಹಮ್ಮದ್, ಚೈತನ್ಯ ಮತ್ತಿತರರನ್ನು ತಮ್ಮ ಸಮೀಪದ ಬಂಧುಗಳೋ ಎಂಬಂತೆ ಅವರು ಪ್ರೀತಿಸುತ್ತಿದ್ದರು. ಹೀಗಾಗಿ, ಸಹಜವಾಗಿಯೇ ಅವರು ಆ ಮಹಾನ್ ಪ್ರವಾದಿಗಳ ಅನುಯಾಯಿಗಳನ್ನೂ ಪ್ರೀತಿಸುತ್ತಿದ್ದರು. ಶ್ರೀರಾಮಕೃಷ್ಣರು ಎಲ್ಲ ಜನರ ಮೇಲಿರಿಸಿದ್ದ ವಿಶ್ವಾತ್ಮಕ ಮತ್ತು ಅವ್ಯಾಜ ಪ್ರೀತಿಯೇ ರಾಮಕೃಷ್ಣ ಮಹಾಸಂಘದ ಸದಸ್ಯರನ್ನೆಲ್ಲ ಒಗ್ಗೂಡಿಸುವ ಒಂದು ಮೂಲಭೂತ ಶಕ್ತಿಯಾಗಿದೆ.

೪. ಇನ್ನೊಂದು ಶಕ್ತಿಯೆಂದರೆ, ಅದರಷ್ಟೇ ವಿಶ್ವವ್ಯಾಪಿಯೂ, ಅವ್ಯಾಜ ಮತ್ತು ಸರ್ವಕ್ಷಮಾದಾಯಿಯೂ ಆದ ಶ್ರೀಮಾತೆ ಶಾರದಾದೇವಿಯವರ ಸರ್ವಸಹನಾಪ್ರೇಮ. ಅವರು ಅಂತಹ ವಿಶ್ವಮಾತೃತ್ವವನ್ನು ತಮ್ಮೊಳಗೆ ಮೂಡಿಸಿಕೊಂಡಿದ್ದರು.

ಶತಶತಮಾನಗಳಿಂದ ಮಾನವ ಜನಾಂಗವು ವಿಶ್ವಭ್ರಾತೃತ್ವದ ಬಗ್ಗೆ ಕನಸು ಕಾಣುತ್ತ ಬಂದಿದೆ. ಆದರೂ ಆ ಆದರ್ಶ ಇದುವರೆಗೂ ನನಸಾಗಿಲ್ಲ. ಇದಕ್ಕೆ ಕಾರಣವೆಂದರೆ, ಸಮಾಜವನ್ನು ಒಟ್ಟುಗೂಡಿಸುವ ಬಂಧನವು ಮಾತೃತ್ವದ್ದಾಗಿದೆ. ಆದ್ದರಿಂದ ವಿಶ್ವಭ್ರಾತೃತ್ವವು ಮೊದಲು ವಿಶ್ವಮಾತೃತ್ವವನ್ನು ಅಪೇಕ್ಷಿಸುತ್ತದೆ. ಸಾಮಾಜಿಕ ಜೀವನದಲ್ಲಿ ಮಾತೃತ್ವವು ವಹಿಸುವ ಮಹತ್ವದ ಪಾತ್ರವನ್ನು ಜೆ.ಜೆ. ಬಕೊಫೆನ್, ಎಲ್.ಎಚ್. ಮಾರ್ಗನ್ ಮುಂತಾದ ಮಾನವಶಾಸ್ತ್ರಜ್ಞರು ಎತ್ತಿ ತೋರಿಸಿದ್ದಾರೆ. ಇದು ಅವರು ಕೈಗೊಂಡ ಪುರೋಗಾಮಿ ಕಾರ್ಯದ ಫಲವಾಗಿದೆ.

ಪಿತೃಪ್ರಧಾನ ಸಮಾಜಗಳು ಪ್ರತ್ಯೇಕ ಮತ್ತು ಖಂಡವಾಗಿರುತ್ತವೆ. ಆದರೆ ಮಾತೃಪ್ರಧಾನ ಸಮಾಜಗಳು ಸರ್ವಾಂಗೀಣ ಮತ್ತು ಅಖಂಡ ವಾಗಿರುತ್ತವೆ. ವಿವಿಧ ಸಂಸ್ಕೃತಿಗಳು, ಧರ್ಮಗಳು, ಜನಾಂಗಗಳು ಮತ್ತು ಸಾಮಾಜಿಕ ಅಂತಸ್ತುಗಳಿಗೆ ಸೇರಿದ ಜನರನ್ನು ಒಟ್ಟುಗೂಡಿಸಲು ಅವುಗಳ ಕೇಂದ್ರದಲ್ಲಿ ಮಾತೃಪ್ರತಿಮೆಯೊಂದನ್ನು ನಿಲ್ಲಿಸುವುದು ಅವಶ್ಯಕ.

ಶ್ರೀರಾಮಕೃಷ್ಣ ಮಹಾಸಂಘದಲ್ಲಿ ಶ್ರೀಶಾರದಾದೇವಿಯವರು ವಹಿಸಿದ ಪಾತ್ರ ಇದೇ. ನಿರಕ್ಷರ ಗ್ರಾಮೀಣ ಬಾಲಕಿಯಾಗಿದ್ದ ಅವರು ತಮ್ಮ ಪರಿಶುದ್ಧ ಪಾವಿತ್ರ್ಯತೆಯಿಂದ, ನಿಸ್ವಾರ್ಥ ಪ್ರೇಮದಿಂದ, ಅವಿರತ ಸಹನಾಶಕ್ತಿಯಿಂದ ಮತ್ತು ದಿವ್ಯ ದರ್ಶನಗಳಿಂದ, ಹಿಂದೂ, ಕ್ರೈಸ್ತ, ಮುಸಲ್ಮಾನ, ಪಾರ್ಸಿ.... ಜನರ, ಒಟ್ಟಾರೆ ಇಡೀ ಮಾನವ ಜನಾಂಗದ ಮಾತೆಯಾಗಿ ತಮ್ಮನ್ನು ರೂಪಿಸಿಕೊಂಡರು. ಅವರ 'ಮಕ್ಕಳಲ್ಲಿ' ಅಮ್ಜದ್ ಎಂಬ ಹೆಸರಿನ ದರೋಡೆಕಾರನೂ ಇದ್ದನು. ಅವನ ಬಗ್ಗೆ ಶ್ರೀಮಾತೆಯವರು ಹೀಗೆ ಹೇಳುತ್ತಿದ್ದರು: "ಶರತ್ (ಸ್ವಾಮಿ ಶಾರದಾನಂದಜಿ, ರಾಮಕೃಷ್ಣ ಮಹಾಸಂಘದ ಅಂದಿನ ಕಾರ್ಯದರ್ಶಿ) ನನ್ನ ಮಗ ಹೇಗೋ, ಹಾಗೆಯೇ ಈ ಅಮ್ಜದ್ ಕೂಡ." ರಾಮಕೃಷ್ಣ ಮಠ ಮತ್ತು ಮಿಷನ್ ಧರ್ಮಸಾಮರಸ್ಯದ ಆದರ್ಶವನ್ನು ತನ್ನ ಸಂನ್ಯಾಸೀ ಸಂಪ್ರದಾಯದಲ್ಲಿ ಮತ್ತು ಗೃಹಸ್ಥ ಭಕ್ತರಲ್ಲಿ ಅನುಷ್ಠಾನಗೊಳಿಸಿರುವುದಕ್ಕೆ ಶ್ರೀಮಾತೆ ಶಾರದಾದೇವಿಯವರ ಕೃಪಾಪೂರಿತ, ಸಮಗ್ರ ಮತ್ತು ಸಂರಕ್ಷಕ ಪ್ರಭಾವವು ಬಹಳಷ್ಟು ಮಟ್ಟಿಗೆ ಕಾರಣ ಎಂದು ಹೇಳಬಹುದು. ಆ ಪ್ರಭಾವ ಈ ಆಂದೋಲನ ಸದಸ್ಯರ ಮೇಲೆ ಇಂದಿಗೂ ಮೂಡಿರು ವುದನ್ನು ನಾವು ಕಾಣಬಹುದಾಗಿದೆ.

## ಭವಿಷ್ಯ ದೃಷ್ಟಿ

ಈ ಲೇಖನದಲ್ಲಿ ಇದುವರೆಗೆ, ಧರ್ಮಸಮನ್ವಯದ ಬಗ್ಗೆ ಶ್ರೀರಾಮ ಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರ ಪ್ರಮುಖ ಬೋಧನೆಗಳ ಸಂಕ್ಷಿಪ್ತ ರೂಪುರೇಷೆಗಳನ್ನು ನೀಡಲು ಯತ್ನಿಸಿದ್ದೇವೆ. ಅದಲ್ಲದೆ, ಈ ಬೋಧನೆಗಳನ್ನು ಭಾರತ ಮತ್ತು ಇತರ ದೇಶಗಳಲ್ಲಿ ಹಬ್ಬಿರುವ

ರಾಮಕೃಷ್ಣ ಮಹಾಸಂಘದ ಶಾಖಾಕೇಂದ್ರಗಳಲ್ಲಿ ಹೇಗೆ ಅನುಷ್ಠಾನಕ್ಕೆ ತರಲಾಗುತ್ತಿದೆ ಎಂಬುದನ್ನೂ ಹೇಳಲಾಗಿದೆ.

ಮಾನವ ಜನಾಂಗದ ಭವಿಷ್ಯವೇನೆಂದು ಹೇಳುವುದು ಕಷ್ಟವೇ ಆದರೂ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ಸಂದೇಶಗಳ ಸಮಂಜಸತೆ ಮತ್ತು ಪ್ರಭಾವಗಳು ಮುಂಬರುವ ದಶಕಗಳಲ್ಲಿ ಮತ್ತು ಶತಮಾನಗಳಲ್ಲಿ ಹೆಚ್ಚುತ್ತ ಹೋಗುವುದೆಂದು ನಂಬಲು ಸಾಕಷ್ಟು ಸೂಚನೆಗಳಿರುವುದನ್ನು ನಾವು ಕಾಣಬಹುದು.

೨೧ ನೆಯ ಶತಮಾನದ ಅರುಣೋದಯದ ಸಮಯದಲ್ಲಿ ನಾವು ಇಡೀ ವಿಶ್ವದಾದ್ಯಂತ ನಾಲ್ಕು ಪ್ರಮುಖ ಬೆಳವಣಿಗೆಗಳನ್ನು ಕಾಣಬಹುದಾಗಿದೆ. ಮೊದಲನೆಯದು, ಮಾನವ ಜೀವಿತದಲ್ಲಿ ವಿಜ್ಞಾನ ಮತ್ತು ತಾಂತ್ರಿಕತೆಯ ಅಗಾಧ ಪ್ರಭಾವ. ಇನ್ನೊಂದು ಆರ್ಥಿಕತೆಯ ಉದಾರೀಕರಣ. ಮೂರನೆಯ ಬೆಳವಣಿಗೆಯೆಂದರೆ, ಜಾಗೃತ ಮಾನವೀಯತೆ. ಅದನ್ನು ತುಳಿದಿಟ್ಟ ಜನರ ಹಕ್ಕುಗಳ ಬಗೆಗಿನ ಪರಿಜ್ಞಾನ, ಎಲ್ಲ ಬಗೆಯ ಶೋಷಣೆ, ಅನ್ಯಾಯ, ನಿರಂಕುಶತೆ, ಕ್ರೌರ್ಯ ಮತ್ತು ದಾಸ್ಯಗಳಿಗೆ ವಿರೋಧದ ರೂಪದಲ್ಲಿ ಪ್ರಕಟವಾಗುವುದನ್ನು ನಾವು ಕಾಣಬಹುದು. ನಾಲ್ಕನೆಯ ಬೆಳವಣಿಗೆಯೆಂದರೆ, ಮಾನವ ಜನಾಂಗದ ಆಧ್ಯಾತ್ಮಿಕ ಚೈತನ್ಯವು ನಿಧಾನಗತಿಯಲ್ಲಿ ಜಾಗೃತವಾಗುತ್ತಿರುವುದು.

ಈ ಆಧ್ಯಾತ್ಮಿಕ ಜಾಗೃತಿಯ ಸಂಕೇತಗಳನ್ನು ನಾವು ವಿಶ್ವದಾದ್ಯಂತ ಕಾಣಬಹುದು. ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತಿ, ಗುರುಗಳು, ಯೋಗಿಗಳು, ಲಾಮಾಗಳು ಮತ್ತಿತರ ಆಧ್ಯಾತ್ಮಿಕ ಬೋಧಕರ ಪ್ರಸಿದ್ಧಿ, ಸಾವಿರಾರು ಆಧ್ಯಾತ್ಮಿಕ ಕೇಂದ್ರಗಳು ಮತ್ತು ಸಂಸ್ಥೆಗಳು ತಲೆಯೆತ್ತಿರುವುದು ಈ ಜಾಗೃತಿಗೆ ದ್ಯೋತಕಗಳು. ಅಭಿವೃದ್ಧಿ ಹೊಂದಿದ ದೇಶಗಳು ಸಾಮಾಜಿಕ ಸಮಸ್ಯೆಗಳ ಆಧಿಕ್ಯದಿಂದ ವ್ಯಾಧಿಗ್ರಸ್ತವಾಗಿವೆ. ಅವೆಂದರೆ, ಅಪರಾಧಗಳು, ಹಿಂಸೆ, ಅನೈತಿಕತೆ, ಮದ್ಯಪಾನ, ಒಡೆಯುತ್ತಿರುವ ಕುಟುಂಬಗಳು ಇತ್ಯಾದಿ ಮತ್ತು ಜೀವನದ ಪ್ರಜ್ವಲ ಸಮಸ್ಯೆಗಳಾದ (existential problems) ಅರ್ಥಶೂನ್ಯತೆ, ಏಕಾಂಗಿತನ, ಜಿಗುಪ್ಸೆ, ನರದೌರ್ಬಲ್ಯಗಳು ಮುಂತಾದವು. ಆಧ್ಯಾತ್ಮಿಕ ಜೀವನವನ್ನಪ್ಪುವುದರಿಂದ ಮಾತ್ರವೇ ಈ ಸಮಸ್ಯೆಗಳನ್ನು ಪರಿಹರಿಸಬಹುದೆಂಬ ಅರಿವು ಹೆಚ್ಚಾಗುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಾಸಿಸುವ ಲಕ್ಷಗಟ್ಟಲೆ ಜನರು ಧ್ಯಾನ, ಯೋಗ, ವಿಪಸ್ಸನ ಮುಂತಾದ ಆಧ್ಯಾತ್ಮಿಕ ವಿಧಾನಗಳನ್ನು ಅನುಸರಿಸುತ್ತಿದ್ದಾರೆ.

ಈ ಆಧುನಿಕ ಆಧ್ಯಾತ್ಮಿಕ ಜಾಗೃತಿಯಲ್ಲಿ ಕಂಡುಬರುವ ಗಮನಾರ್ಹ ಸಂಗತಿಯೆಂದರೆ, ಅದು ಸಾಂಪ್ರದಾಯಿಕ ಧರ್ಮಗಳ ಎಲ್ಲೆಗಳನ್ನು ಮೀರಿ ನಿಂತಿರುವುದು. ಅದಷ್ಟೇ ಅಲ್ಲ, ಈ ಆಧ್ಯಾತ್ಮಿಕ ಆಂದೋಲನಗಳು ಬಹುಪಾಲು ಯಾವ ಧರ್ಮಕ್ಕೂ ಸೇರಿದವುಗಳಲ್ಲ. ಅವನ್ನು ಅನುಸರಿಸಲು, ಭಗವಂತನ ಅಥವಾ ಯಾವುದೇ ಧರ್ಮಗ್ರಂಥದ ಮೇಲಿನ ಶ್ರದ್ಧೆಯ ಆವಶ್ಯಕತೆ ಇಲ್ಲ. ಈ ಬಗೆಯ 'ಲೌಕಿಕ ಆಧ್ಯಾತ್ಮಿಕತೆ' ಎಂದು ಕರೆಯಲಾಗುವ ಭಾವವು ನಾವು ಹಿಂದೆ ಚರ್ಚಿಸಿದ, ಸ್ವಾಮಿ ವಿವೇಕಾನಂದರ ವಿಶ್ವಧರ್ಮದ ಬಗೆಗಿನ ಮೂರನೆಯ ಪರಿಕಲ್ಪನೆಗೆ ನಿಕಟವಾಗಿದೆ.

೧೯ ನೆಯ ಶತಮಾನದ ಮಧ್ಯಭಾಗದಲ್ಲಿ ಶ್ರೀರಾಮಕೃಷ್ಣರ ದಿವ್ಯವಾಣಿಯು, ವಿವಿಧ ಹೆಸರುಗಳಿಂದ ಕರೆಯಲ್ಪಡುವ ಪರತತ್ತ್ವದ ಸಾಕ್ಷಾತ್ಕಾರವೇ ಮಾನವ ಜೀವಿತದ ಪರಮಾರ್ಥ ಮತ್ತು ಪರಮೋದ್ದೇಶವೆಂದೂ, ಅದರ ಮೂಲಕವೇ ವ್ಯಕ್ತಿಯು ನಿತ್ಯತೃಪ್ತಿ ಮತ್ತು ಸಾರ್ಥಕತೆಗಳನ್ನು ಗಳಿಸಬಹುದೆಂದೂ ಜನರಿಗೆ ಜ್ಞಾಪಿಸಿಕೊಟ್ಟಿತು. ಮುಂದುವರೆದು, ಆಧ್ಯಾತ್ಮಿಕ ಜೀವನವೇ ಎಲ್ಲ ಧರ್ಮಗಳ ಸಾರಸರ್ವಸ್ವವೆಂದು ಶ್ರೀರಾಮಕೃಷ್ಣರು ಬೋಧಿಸಿದರು. ಈ ಭಾವನೆಗಳು ಗುಪ್ತಗಾಮಿನಿಯಾಗಿ ಪ್ರಪಂಚದೆಲ್ಲೆಡೆ ಪಸರಿಸಿರುವುದನ್ನು ನಾವು ಕಾಣಬಹುದು.

ಶ್ರೀರಾಮಕೃಷ್ಣರು ತಮ್ಮ ತೀವ್ರ ಆಧ್ಯಾತ್ಮಿಕ ಸಾಧನೆಗಳಿಂದ ಮತ್ತು ಭಾವಪೂರ್ಣ ಪ್ರಾರ್ಥನೆಗಳಿಂದ ಮಾನವ ಜನಾಂಗದ ಆಧ್ಯಾತ್ಮಿಕ ಅರಿವನ್ನು ಜಾಗೃತಗೊಳಿಸಿದರೆಂದು ಸ್ವಾಮಿ ವಿವೇಕಾನಂದರು ನಂಬಿದ್ದರು. ಮಾನವರೆಲ್ಲರೂ ಎಂತಹ ಉನ್ನತ ಅರಿವಿನ ಹಂತವನ್ನು ತಲುಪುವರೆಂದರೆ, ಸಾಧಾರಣ ಮಾನವ ಜೀವಿತವು ಆಧ್ಯಾತ್ಮಿಕ ಜೀವನ ಅಥವಾ ದಿವ್ಯ ಜೀವನವಾಗಿ ಮಾರ್ಪಡುವುದು. ಅಂತಹ ಸಮಯವೊಂದು ಮುಂದೊಮ್ಮೆ ಸಾಕಾರಗೊಳ್ಳುವುದನ್ನು ಸ್ವಾಮೀಜಿ ತಮ್ಮ ಭವಿಷ್ಯದ್ದರ್ಶನದಲ್ಲಿ ಕಂಡಿದ್ದರು. ಸ್ವಾಮೀಜಿ ಹೇಳುತ್ತಾರೆ:

> ಧಾರ್ಮಿಕ ಭಾವನೆಗಳು ವಿಶಾಲವಾಗಬೇಕು, ಅನಂತವಾಗಬೇಕು. ಆಗ ಮಾತ್ರ ಧರ್ಮದ ಪೂರ್ಣ ಪ್ರಭಾವವನ್ನು ಕಾಣಲು ಸಾಧ್ಯ. ಧಾರ್ಮಿಕಶಕ್ತಿಯು ಈಗ ತಾನೆ ಪ್ರಕಟವಾಗಲು ಆರಂಭಿಸಿದೆ. ಪ್ರಪಂಚದಲ್ಲಿ ಧರ್ಮವು ಅಳಿಯುತ್ತದೆ, ಆಧ್ಯಾತ್ಮಿಕ ಭಾವನೆ ಅಳಿಯುತ್ತಿದೆ ಎನ್ನುವುದನ್ನು ಹಲವಾರು ಬಾರಿ ಕೇಳುತ್ತೇವೆ. ಆದರೆ, ಅವುಗಳ ಬೆಳವಣಿಗೆ ಈಗ ತಾನೆ ಪ್ರಾರಂಭವಾಗಿದೆ ಎಂದು ನನ್ನ ಅನಿಸಿಕೆ. ವಿಶಾಲವಾದ, ಪರಿಶುದ್ಧವಾದ ಧಾರ್ಮಿಕ ಶಕ್ತಿಯು ಮಾನವ ಜೀವನದಲ್ಲಿ ಹಾಸುಹೊಕ್ಕಾಗಿ ಪರಿಣಮಿಸುವುದು. ಎಲ್ಲಿಯವರೆಗೆ ಧರ್ಮವು ಎಲ್ಲೋ ಕೆಲವು ಆರಿಸಿದ ವ್ಯಕ್ತಿಗಳ ಕೈಯಲ್ಲಿದ್ದಿತೋ ಆಗ ಅದು ದೇವಸ್ಥಾನ, ಚರ್ಚು, ಶಾಸ್ತ್ರ, ಆಚಾರ, ವ್ಯವಹಾರ – ಇವುಗಳಲ್ಲಿತ್ತು. ಆದರೆ ಎಂದು ನಾವು ನಿಜವಾದ ಆಧ್ಯಾತ್ಮಿಕ ಸಮಷ್ಟಿ ಭಾವನೆಗೆ ಬರುವೆವೋ ಆಗ ಮಾತ್ರವೇ ಧರ್ಮ ಸತ್ಯವಾಗುವುದು, ಜೀವಂತವಾಗುವುದು. ಅದು ನಮ್ಮ ಸ್ವಭಾವದಲ್ಲಿ ವ್ಯಕ್ತವಾಗುವುದು; ನಮ್ಮ ಪ್ರತಿಯೊಂದು ಕಾರ್ಯ ಕಲಾಪದಲ್ಲಿಯೂ ಇರುವುದು; ನಮ್ಮ ಸಮಾಜದ ಅಂಗಾಂಗಗಳನ್ನು ಪ್ರವೇಶಿಸುವುದು ಮತ್ತು ಹಿಂದೆಂದೂ ಇರದಿದ್ದ ಮಹಾಕಲ್ಯಾಣಪ್ರದವಾದ ಶಕ್ತಿಯಾಗುವುದು.[೩]

ಮಹಾನ್ ಋಷಿಯೊಬ್ಬನ ಈ ಭವಿಷ್ಯವಾಣಿಯ ನುಡಿಗಳು ಸತ್ಯವಾಗದಿರುವುದಿಲ್ಲ. ಅವು ಮುಂದಿನ ದಶಕಗಳಲ್ಲಿ ಅಲ್ಲದಿದ್ದರೂ, ಮುಂದಿನ ಶತಮಾನಗಳಲ್ಲಿಯಾದರೂ ವಾಸ್ತವವಾಗುವವು. ಏನೇ ಇರಲಿ, ಮಾನವ ಕುಟುಂಬದ ಭವ್ಯ ಆಧ್ಯಾತ್ಮಿಕ ಪರಿವರ್ತನೆಯಲ್ಲಿ ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ವಿಶ್ವವ್ಯಾಪಿ ಸಂದೇಶವು ಭವಿಷ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸಲಿದೆ ಎನ್ನುವುದಂತೂ ವಾಸ್ತವ.

(ಮುಗಿಯಿತು)

**ಆಕರಗಳು:**

೧. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೭: ೩೧೪
೨. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೨: ೨೯
೩. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ೨:೧೨–೧೩